ಅನುಮೋದನೆಗೆ ಸಲ್ಲಿಸಲಾಗಿದೆ.

ಈ) 1994ರಿಂದ ಕೇಂದ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸುತ್ತಿದ್ದು ಕೇಂದ್ರ ಸರ್ಕಾರವು ದಿ: 21-6-2000ದ ಪತ್ರದಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಿದೆ. ಆದಾಗ್ಯೂ ಮತ್ತೊಮ್ಮೆ ಇದನ್ನು ಪುನರ್‌ಪರಿಶೀಲಿಸಿ ಅನುಮೋದನೆ ನೀಡಲು ಕೋರಿ ಕೇಂದ್ರ ಸರ್ಕಾರಕ್ಕೆ ದಿ:8-2-2000 ದಂದು ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಕೇಂದ್ರ ಸರ್ಕಾರದ ಅನುಮತಿಯನ್ನು ನಿರೀಕ್ಷಿಸಲಾಗಿದೆ.

ಉ) ಮೇಲಿನ(ಈ) ಉತ್ತರದಂತೆ ಕೇಂದ್ರ ಸರ್ಕಾರದ ಅನುಮೋದನೆ ದೊರೆತ ನಂತರ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ರಸ್ತೆ ಕಾಮಗಾರಿ ಮತ್ತು ಸೇತುವೆ ನಿರ್ಮಾಣ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 693(114)

ಸದಸ್ಯರ ಹೆಸರು : ಶ್ರೀ ಭರಮಗೌಡ ಆ. ಕಾಗೆ (ಕಾಗವಾಡ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

1. ಬೆಳಗಾಂವ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ಐನಾಪೂರ, ಶಿನಾಳ, ತಂಗಡಿ, ಅಥಣಿ ಈ ರಸ್ತೆಯು ನಬಾರ್ಡ್ ಯೋಜನೆಯಿಂದ ಪೂರ್ಣಗೊಂಡಿದೆಯೇ?

2. ಪೂರ್ಣಗೊಂಡಿರದಿದ್ದರೆ, ಶಿನಾಳ ಮತ್ತು ತೆಂಗಡಿ ಮಧ್ಯೆ ಇರುವ ಹಳ್ಳಕ್ಕೆ ಸೇತುವೆ ಮಧ್ಯೆ ಇರುವ ಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ, ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಉತ್ತರ

1. ಪೂರ್ಣಗೊಂಡಿದೆ.

2. ರಸ್ತೆ ಕಾಮಗಾರಿ ಪೂರ್ಣಗೊಂಡಿದೆ. ಸೇತುವೆ ನಿರ್ಮಾಣ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸೇತುವೆ ಕಾಮಗಾರಿಯನ್ನು ನಬಾರ್ಡ್

ಯೋಜನೆಯಡಿ ಕೈಗೊಳ್ಳುವ ಬಗ್ಗೆ ಸಚಿವ ಸಂಪುಟ ಉಪ ಸಮಿತಿಯು ನಿರ್ಧರಿಸಬೇಕಿದ್ದು, ಸಮಿತಿಯಿಂದ ಒಪ್ಪಿತವಾದಲ್ಲಿ ನಬಾರ್ಡ್ ಅನುಮೋದನೆ ಪಡೆದ ನಂತರ ಕೈಗೊಳ್ಳಬೇಕಿರುತ್ತದೆ.

ಅಥಣಿ ತಾಲ್ಲೂಕಿನಾದ್ಯಂತ 'ಭೂದು' ಪ್ರದೇಶವೆಂದು ಘೋಷಿಸದೇ ಇರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 694(185)

ಸದಸ್ಯರ ಹೆಸರು : ಶ್ರೀ ಭರಮಗೌಡ ಆ.ಕಾಗೆ(ಕಾಗವಾಡ)

ಉತ್ತರಿಸುವ ಸಚಿವರು : ಶ್ರೀ ವಿ.ಮುನಿಯಪ್ಪ(ಗಣಿ ಮತ್ತು ಭೂ ವಿಜ್ಞಾನ ಸಚಿವರು)

ಪ್ರಶ್ನೆ

ಅ) ಬೆಳಗಾಂವ್ ಜಿಲ್ಲೆಯ ಅಥಣಿ ತಾಲ್ಲೂಕಿನಾದ್ಯಂತ 'ಬೂದು' ಪ್ರದೇಶವೆಂದು ಘೋಷಿಸಲಾಗಿದೆಯೇ?

ಆ) 'ಬೂದು' ಪ್ರದೇಶವನ್ನು ತೆಗೆದು ಹಾಕಿ ಇಲ್ಲಿನ ರೈತರಿಗೆ ಅನುಕೂಲ ಕಲ್ಪಿಸಿ ಕೊಡುವಂತೆ ತಿಳಿಸಿದ್ದರೂ ಇದುವರೆವಿಗೂ ತೆಗೆದು ಹಾಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ, ಯಾವಾಗ ಇದನ್ನು ತೆಗೆದು ಹಾಕಲಾಗುವುದು?

ಉತ್ತರ

ಅ) ಹೌದು.

ಆ) ಸದರಿ ವರ್ಗೀಕರಣವನ್ನು ಮಾರ್ಪಾಡು ಮಾಡಬೇಕೆಂಬ ಮನವಿಯು ಪರಿಶೀಲನೆಯಲ್ಲಿದೆ.

ಇ) ಸಂಬಂಧಿತ ಎಲ್ಲಾ ಮಾಹಿತಿಗಳನ್ನು ಆಧರಿಸಿ ಅಂತರ್ಜಲ ಸ್ಥಿತಿ ಗತಿಗಳನ್ನು ಲೆಕ್ಕಾಚಾರ ಮಾಡಲಾಗುತ್ತಿದ್ದು ಸದ್ಯದಲ್ಲೇ ಈ ಬಗ್ಗೆ ಸೂಕ್ತವಾದ ಶಿಫಾರಸ್ಸನ್ನು ನಬಾರ್ಡ್‌ಗೆ ಮಾಡಲಾಗುವುದು.